ಅ) ಲೆಕ್ಕ ಪರಿಶೋಧನೆ ಆಕ್ಷೇಪಣೆ ಬಂದಿರುವ ಮೊತ್ತವೆಷ್ಟು?

ಇ) ಆಕ್ಷೇಪಿಸಲಾದ ಎಲ್ಲಾ ಮೊಬಲಗು ವಸೂಲು ಮಾಡಲಾಗಿದೆಯೇ ಮತ್ತು ಮಂಡಲಿಗೆ ಜಮಾ ಮಾಡಲಾಗಿದೆಯೇ?

ಉ) ತಪಿತಸ್ಥರುಗಳ ವಿರುದ್ಧ ಕೈಗೊಳ್ಳಲಾದ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) (2001-02 ಅವಧಿಯ ಮಹಾಲೇಖಪಾಲರ ಲೆಕ್ಕ ತಪಾಸಣೆ ಇನ್ನೂ ಮುಗಿದಿಲ್ಲ). ಕಾನೂನು ಬಾಹಿರವಾಗಿ ಯಾವುದೇ ವೆಚ್ಚವನ್ನು ಮಾಡಿಲ್ಲ.

ಆ) ಮಹಾಲೇಖಪಾಲಕರವರ ಲೆಕ್ಕ ಪರಿಶೋಧನೆಯ ಪ್ರಕಾರ ರೂ. 84.48 ಲಕ್ಷಗಳು.

ಇ) ಅ) ಬಡ್ಡಿ ಬಾಬ್ತು ಹುಡ್ಕೋ ಸಂಸ್ಥೆಯ ಬೇಡಿಕೆಯ ಮೇರೆಗೆ ರೂ. 47.79 ಲಕ್ಷಗಳನ್ನು ಪಾವತಿಸಲಾಗಿದೆ. ಆಕ್ಷೇಪಿಸಿದ ಸಾಲದ ಬಡ್ಡಿ ಲೆಕ್ಕ ಸಂಹೊಂದಿದೆ. ತಾಳೆ ಮಾಡಲಾಗುತ್ತಿದೆ. ಇದು ಅಂತಿಮ ಹಂತದಲ್ಲಿದೆ.

ಆ) ಕೆ.ಪಿ.ಟಿ.ಸಿ.ಎಲ್ ಸಂಸ್ಥೆಗೆ ಹೆಚ್ಚುವರಿ ರೂ. 35.90 ಲಕ್ಷ ಪಾವತಿಸಲಾಗಿದೆ. ಈ ಬಗ್ಗೆ ಸಂಬಂದಿಸಿದ ವಿಭಾಗದೊಡನೆ ಸಂಪರ್ಕಿಸಿದೆ. ಇನ್ನು ರೂ. 16.00 ಲಕ್ಷ ವಸೂಲಾತಿಗಾಗಿ ಕ್ರಮ ಜರೂಗಿಸಲಾಗಿದೆ.

ಇ) ರೂ. 0.79 ಲಕ್ಷ ಎಂ.ಎ.ಎಸ್. ಲೆಕ್ಕದಲ್ಲಿ ಕೊರತೆ ಕಂಡು ಬಂದಿದೆ ಇದನ್ನು ಸಂಬಂಧಪಟ್ಟವರದಿಂದ ವಸೂಲು ಮಾಡಲಾಗಿದೆ.

4) ಕ್ರ.ಸಂ. 3 (ಅ ಮತ್ತು ಆ) ವಿಷಯದಲ್ಲಿ ಸಂಬಂಧಪಟ್ಟ ಸಂಸ್ಥೆಗಳೊಂದಿಗೆ ವ್ಯವಹರಿಸಲಾಗುತ್ತಿದೆ. ಇ) ರೂ. 0.79 ಲಕ್ಷ ಎಂ.ಎ.ಎಸ್ ಕೊರತೆಯನ್ನು ನಿವೃತ್ತಿಯ ಸಂದರ್ಭದಲ್ಲಿ ವಸೂಲಾತಿ ಮಾಡಲಾಗಿದೆ.

ರಾಜ್ಯದಲ್ಲಿ ಡಿಸ್ಟಲರಿಗಳ ಕಾರ್ಯನಿರ್ವಹಣೆ

1588 (1865) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 11.10.99ರಿಂದ ದಿನಾಂಕ 31.03.2002ರ ವರೆಗೆ ಹೊಸದಾಗಿ ಯಾವ ಜಿಲ್ಲೆಯಲ್ಲಿ ಎಷ್ಟು ಡಿಸ್ಟಿಲರಿ ಪ್ರಾರಂಭಿಸಲು ಪರವಾನಗಿ ನೀಡಲಾಗಿದೆ? ಅವು ಎಲ್ಲಿವೆ?

ಆ) ಈ ಕಾರ್ಖಾನೆಗಳಿಗೆ ಯಾವ ಮೂಲದಿಂದ ಮತ್ತು ಸ್ಥಳದಿಂದ ಎಷ್ಟು ಪ್ರಮಾಣದ ಕಾಕಂಬಿ ತರಲು ಅನುಮತಿ ನೀಡಲಾಗಿದೆ?

ಇ) ಈ ಕಾರ್ಖಾನೆಗಳಿಗೆ ಎಷ್ಟು ಲೀಟರ್ ಮದ್ಯಸಾರ ಮತ್ತು ಮದ್ಯ ತಯಾರು ಮಾಡಲು ಅನುಮತಿ ನೀಡಲಾಗಿದೆ?

ಈ) ಈ ಡಿಸ್ಟಿಲರಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡಿರುವ ಪ್ರಕರಣಗಳು ಎಷ್ಟು? ಎಷ್ಟು ದಂಡ ವಿಧಿಸಲಾಗಿದೆ?

ಉ) ಕಾನೂನು ಉಲ್ಲಂಘನೆಗೆ ಎಷ್ಟು ಡಿಸ್ಟಿಲರಿಗಳ ಪರವಾನಗಿಯನ್ನು ರದ್ದುಪಡಿಸಲಾಗಿದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಕಾಕಂಬಿಯಿಂದ ಮದ್ಯ ಉತ್ಪಾದಿಸಲು ಬೆಳಗಾಂ ಜಿಲ್ಲೆಯಲ್ಲಿ 2 ಹಾಗೂ ಮಂಡ್ಯ ಜಿಲ್ಲೆಯಲ್ಲಿ 1 ಪ್ರಾಥಮಿಕ ಡಿಸ್ಟಿಲರಿ ಸನ್ನದು ನೀಡಲಾಗಿದೆ. ಅವುಗಳಿಂದರೆ :-

ಬೆಳಗಾಂ ಜಿಲ್ಲೆ

1) ಮೆ: ಶ್ರೀದೂಧ್ ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಬೆಳಗಾಂ ಜಿಲ್ಲೆ (ದಿನಾಂಕ 28.12.1999)

2) ಮೆ : ಶ್ರೀ ರೇಣುಕಾ ಶುಗರ್ಸ್ ಲಿ., ಆರ್.ಎಸ್. ಸಂ 367:1 ಮುನೋಳಿ ಗ್ರಾಮ, ಸೌಂದತ್ತಿ ತಾಲ್ಲೂಕು, ಬೆಳಗಾಂ ಜಿಲ್ಲೆ, (ದಿನಾಂಕ 22.9.2001)

ಮಂಡ್ಯ ಜಿಲ್ಲೆ

1 ಮೆ : ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ಭಾರತಿನಗರ, ಕೆ.ಎಂ. ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ (ದಿನಾಂಕ 27.9.2001)

ಅ) ಈ ಪೈಕಿ ಮೆ : ಶ್ರೀ ರೇಣುಕಾ ಶುಗರ್ಸ್ ಲಿ., ಕಾರ್ಯಾರಂಭ ಮಾಡಿದ್ದು, ಈ ಡಿಸ್ಟಿಲರಿಗೆ (ಫೆಬ್ರವರಿ 2002 ರಿಂದ ಜುಲೈ 2002ರ ವರೆಗಿನ ಅವಧಿಯಲ್ಲಿ) ಅವರದೇ ಆದ ಸಕ್ಕರೆ ಕಾರ್ಖಾನೆಯಿಂದ ಒಟ್ಟು 20,000 ಮೆ.ಟನ್ ಕಾಕಂಬಿಯನ್ನು ಹಂಚಿಕೆ ಮಾಡಲಾಗಿದೆ.

ಆ) ಈ ಡಿಸ್ಟಿಲರಿಗಳ ಮದ್ಯಸಾರ ಉತ್ಪಾದನಾ ಸಾಮರ್ಥ್ಯವು ಕೆಳಕಂಡಂತಿದೆ.

1) ಮೆ : ಶ್ರೀದೂರ್ ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ - ದಿನವಹಿ 30,000 ಲೀ.

2) ಮೆ : ಶ್ರೀ ರೇಣುಕಾ ಶುಗರ್ಸ್ ಲಿ., - ದಿನವಹಿ 60,000 ಲೀ.,

3) ಮೆ : ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ದಿನವಹಿ 60,000 ಲೀ.

ಈ ಡಿಸ್ಟಿಲರಿಗಳಿಗೆ ಭಾರತೀಯ ಮದ್ಯ ಉತ್ಪಾದನೆಗೆ ಅನುಮತಿ ಇರುವುದಿಲ್ಲ.

ಈ) ಈ ಡಿಸ್ಟಿಲರಿಗಳಿಗೆ ಮದ್ಯ ಉತ್ಪಾದನೆಗೆ ಅನುಮತಿ ಇಲ್ಲದಿರುವ ಹಿನ್ನೆಲೆಯಲ್ಲಿ ಇದು ಉದ್ಭವಿಸುವುದಿಲ್ಲ.

ಉ) ಯಾವುದೂ ಇಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಂದಾಯ ಬಡಾವಣೆಗಳ ಸಕ್ರಮೀಕರಣ

1589 (1866) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಷ್ಟು ರೆವಿನ್ಯೂ ಬಡಾವಣೆಗಳಿವೆ;

ಆ) ಇವುಗಳಲ್ಲಿ ಎಷ್ಟನ್ನು ಸಕ್ರಮ ಗೊಳಿಸಲಾಗಿದೆ;

ಇ) ಸಕ್ರಮೀಕರಣದಿಂದ ಬಂದಿರುವ ಆದಾಯ ಎಷ್ಟು; ಪ್ರಕರಣವಾರು ವಿವರ ನೀಡುವುದು;

ಈ) ಬಾಕಿ ಉಳಿದಿರುವ ರೆವಿನ್ಯೂ ಬಡಾವಣೆಗಳನ್ನು ಯಾವಾಗ ಸಕ್ರಮ ಗೊಳಿಸಲಾಗುವುದು;

ಉ) ಸಕ್ರಮಗೊಳಿಸಲು ಇರುವ ಅಡಚಣೆಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ರೆವಿನ್ಯೂ ಬಡಾವಣೆಗಳು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.